# ಇ–ರುಪಿ! ಏನಿದು?




■ ಶಶಿಕುಮಾರ್ ಸಿ.




ಡಿಜಿಟಲೀಕರಣಕ್ಕೆ ದೇಶದಲ್ಲಿ ಹೆಚ್ಚು ಆದ್ಯತೆಯನ್ನು ನೀಡಿರುವ ಹಾಗೂ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಇನ್ನಷ್ಟು ಸಲೀಸಾಗಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಕ್ಯಾಶ್‌ಲೆಸ್ ಪೇಮೆಂಟ್ ಸಲ್ಯೂಷನ್ 'ಇ–ರುಪಿ' (eRUPI) ವೋಚರ್ ಸೇವೆಗೆ ಚಾಲನೆ ನೀಡಿದ್ದಾರೆ. 'ಇ–ರುಪಿ'ಯು ಇವೋಚರ್ ಆಧಾರಿತವಾಗಿ ಕಾರ್ಯ ನಿರ್ವಹಿಸಲಿದೆ.

'ಇ–ರುಪಿ' ವೋಚರ್‌ನ ಈ ವ್ಯವಸ್ಥೆಯನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾವು ಫೈನಾನ್ಶಿಯಲ್ ಸರ್ವೀಸಸ್ ಇಲಾಖೆ, ಆರೋಗ್ಯ ಸಚಿವಾಲಯ ಹಾಗೂ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಿದ್ದು, ನಿರ್ದಿಷ್ಟ ಸೇವೆಗಳಿಗಾಗಿ ಬಳಸಿಕೊಳ್ಳಬಹುದು.

ಈಗಾಗಲೇ ಫೋನ್ ಪೇ, ಗೂಗಲ್ ಪೇ, ಪೇಟಿಎಂ, ವಾಟ್ಸ್‌ಆ್ಯಪ್ ಪೇ ಮುಂತಾದ ಡಿಜಿಟಲ್ ಪೇಮೆಂಟ್ ಆಯ್ಕೆಗಳಿರುವಾಗಿ 'ಇ–ರುಪಿ'ಯ ಅಗತ್ಯವೇನಿತ್ತು ಮತ್ತು ಏನಿದು 'ಇ–ರುಪಿ' ಎನ್ನುವ ಪ್ರಶ್ನೆಗಳು ಮೂಡುವುದು ಸಹಜ. ಡಿಜಿಟಲ್ ಪೇಮೆಂಟ್ ಆ್ಯಪ್‌ಗಳಿಗಿಂತ ಇದು ತೀರಾ ಭಿನ್ನವಾಗಿದ್ದು, ಕಾಗದ ಅಥವಾ ಕಾರ್ಡ್ ರೂಪದಲ್ಲಿ ಇರಲಿದೆ. ಇಂಟರ್‌ನೆಟ್ ಮತ್ತು ಸ್ಮಾರ್ಟ್‌ಫೋನ್ ಇಲ್ಲದೆಯೂ ಇದನ್ನು ಚಲಾವಣೆ ಮಾಡಬಹುದಾಗಿದೆ.

## 'ಇ-ರುಪಿ' ಬಳಕೆ?

ನಿರ್ದಿಷ್ಟ ವಿಚಾರಕ್ಕೆ ಬಳಸಲು ನಿಗದಿತ ಬ್ಯಾಂಕ್‌ಗಳು ನೀಡುವ ವೋಚರ್ ಇದಾಗಿದ್ದು, ಇವು ಇಗಿಫ್ಟ್ ಕಾರ್ಡ್‌ಗಳಿದ್ದಂತೆ. ಪ್ರೀಪೇಯ್ಡ್ ಅಂದರೆ ಮುಂಚಿತವಾಗಿ ಹಣ ಪಾವತಿಸಿ ಈ ವೋಚರ್‌ಗಳನ್ನು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಖರೀದಿಸಬಹುದಾಗಿದೆ. ಈ ವೋಚರ್‌ಗಳ ಬಳಸುವ ವ್ಯಕ್ತಿ ಮತ್ತು ಬಳಸುವ ಉದ್ದೇಶ ನಿರ್ದಿಷ್ಟವಾಗಿರುತ್ತದೆ.

'ಇರುಪಿ' ಎಂಬುದು ಯಾವುದೇ ಪ್ಲಾಟ್‌ಫಾರ್ಮ್ ಅಲ್ಲ. ಇದು ನಿರ್ದಿಷ್ಟ ಸೇವೆಗಾಗಿ ಮಾಡಿರುವಂಥ ವೋಚರ್. ಉದಾಹರಣೆಗೆ, ನೀವು ಆರೋಗ್ಯ ಸೇವೆಗೆ ಇರುಪಿ ವೋಚರ್ ಖರೀದಿಸಿದ್ದರೆ ಅದನ್ನು ಆರೋಗ್ಯ ಉದ್ದೇಶಿತ ಪಾವತಿಗಾಗಿಯೇ ಬಳಸಿ ರಿಡೀಮ್ ಮಾಡಿಕೊಳ್ಳಬೇಕು. ಬೇರೆ ಉದ್ದೇಶಗಳಿಗೆ ಈ ವೋಚರ್ ಬಳಸಲು ಸಾಧ್ಯವಿಲ್ಲ. ವೋಚರ್‌ನ ಕೋಡ್ ಎಸ್ಎಂಎಸ್ ಹಾಗೂ ಒಆರ್ ಕೋಡ್ ಮೂಲಕ ಹಂಚಿಕೊಳ್ಳಬಹುದು.

ಸದ್ಯ ಈ ವೋಚರ್‌ಗಳನ್ನು ಆರೋಗ್ಯಕ್ಕೆ ಸಂಬಂಧಿಸಿದ ಪಾವತಿಗಳಿಗಾಗಿಯೇ ಬಹುತೇಕ ಉಪಯೋಗಿಸಲಾಗುತ್ತದೆ. ಆರೋಗ್ಯ ಸಂಬಂಧಿತ ಎಲ್ಲ ಪಾವತಿಗಳಿಗೂ ಇದನ್ನು ವಿಸ್ತರಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಕಾರ್ಪೊರೇಟ್ ಕಂಪನಿಗಳು ತಮ್ಮ ಸಿಬ್ಬಂದಿಗೆ ಉಡುಗೊರೆ ಅಥವಾ ಕಾಂಪ್ಲಿಮೆಂಟ್ ರೂಪದಲ್ಲಿ ವಿತರಿಸಲು ಇದನ್ನು ಖರೀದಿಸಬಹುದು.

ಕೇಂದ್ರ ಸರ್ಕಾರವು ಈ ಹಿಂದೆ ಕೋವಿಡ್ ಲಸಿಕೆ ಖರೀದಿಗೆ ಇವೋಚರ್ ತರುವುದಾಗಿ ತಿಳಿಸಿತ್ತು. ಆ ಮೂಲಕ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಗೆ ಇವೋಚರ್ ಖರೀದಿಸಬಹುದು ಮತ್ತು ಇತರರಿಗೆ ವೋಚರ್‌ಗಳನ್ನು ಉಡುಗೊರೆಯಾಗಿ ನೀಡಬಹುದು. ಯಾರಾದರು ಒಬ್ಬ ವ್ಯಕ್ತಿ ಈ ವೋಚರ್ ಅನ್ನು ಖರೀದಿಸಿ ತನಗೆ ಬೇಕಾದವರಿಗೆ ನೀಡಬಹುದು. ಹಾಗೆ ನೀಡಿದ ವೋಚರ್ ಬಳಕೆಯಾಗಿದೆಯೇ ಇಲ್ಲವೋ ಎಂಬುದನ್ನು ವೋಚರ್‌ನ ಮೂಲ ಖರೀದಿದಾರರು ಟ್ರ್ಯಾಕ್ ಮಾಡಿ ತಿಳಿದುಕೊಳ್ಳಬಹುದು.

ವೋಚರ್ ಖರೀದಿಗೆ ಫಲಾನುಭವಿಗಳು ತಮ್ಮ ವೈಯಕ್ತಿಕ ಮಾಹಿತಿಯನ್ನು ನೀಡಬೇಕಿಲ್ಲ. ರಿಡೀಮ್ ಮಾಡುವುದಕ್ಕೆ ಕಾರ್ಡ್ ಅಥವಾ ವೋಚರ್‌ನ ಹಾರ್ಡ್ ಕಾಪಿ ಅಗತ್ಯವಿಲ್ಲ. ಸಂದೇಶದ ಮೂಲಕ ಪಡೆಯುವ ಕ್ಯೂಆರ್ ಕೋಡ್ ಲಿಂಕ್ ಅಥವಾ ಕ್ಯೂಆರ್ ಕೋಡ್ ಇದ್ದರೆ ಸಾಕು.

## ಎಲ್ಲೆಲ್ಲಿ ವೋಚರ್ ಲಭ್ಯ?

ಈಗಾಗಲೇ ಎಂಟು ಪ್ರಮುಖ ಬ್ಯಾಂಕ್‌ಗಳಲ್ಲಿ ವೋಚರ್‌ಗಳು ಲಭ್ಯ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ತಿಳಿಸಿದೆ. ಆ ಬ್ಯಾಂಕ್‌ಗಳೆಂದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಕೆನರಾ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್. ■